ಶ್ರೀ ಎಂ. ವೀರಪ್ಪಮೊಯಿಲಿ.—ವಹಿಸಿಕೊಳ್ಳಬೇಕೆಂಬ ಪ್ರೊಪೋಸಲ್ ಇದೆ. ವಹಿಸಿಕೊಳ್ಳುವ ಬಗ್ಗೆ ಯಾವರೀತಿ ತೆಗೆದುಕೊಳ್ಳಬೇಕು ಎನ್ನುವ ಒಂದು ವಿಚಾರ ಸರ್ಕಾರದಮುಂದೆ ಇದೆ. ಅದನ್ನು ನಾವು ಕ್ಯಾಬಿನೆಟ್ ಸಬ್‌ಕಮಿಟಿಯ ಮುಂದೆ ಒಪ್ಪಿಸಿದ್ದೇವೆ ಕ್ಯಾಬಿನೇಟ್ ಸಬ್ ಕಮಿಟಿಯವರದಿಯನ್ನು ಬಂದಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ನನ್ನ ಪ್ರಶ್ನೆ ಏನೆಂದರೆ ಪ್ಯಾಲೆಸ್‌ನಲ್ಲಿ ಇರತಕ್ಕಂಥ ಜಾಗ ಬೆಂಗಳೂರಿನಲ್ಲಿ ಅದನ್ನು ಬಿಟ್ಟರೆ ಅದರಂಥೆ ಜಾಗ ಸಿಕ್ಕುವುದೇ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಹೇಗಾದರೂ ಮಾಡಿ ಈ ಒಂದು ಒಳ್ಳೆಯ ಜಾಗವನ್ನು ಸರ್ಕಾರದವರು ಇಟ್ಟುಕೊಳ್ಳತಕ್ಕಂಥ ಕೆಲಸವನ್ನು ಮಾಡಿಮುಗಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಸದಸ್ಯರು ಹೇಳುವಂಥದ್ದು ತಾತ್ವಿಕವಾಗಿ ಇದ್ದು ಸರ್ಕಾರ ತೆಗೆದುಕೊಳ್ಳಬೇಕೆಂಬ ಪರಿಸ್ಥಿತಿಯ ಲ್ಲಿಪಂಹಾರಾಜರೂ ಕೂಡ ಹೇಳಿದ್ದರು. ಆದರ ಪ್ರಕಾರ ತೆಗೆದುಕೊಳ್ಳಬೇಕಾಗುತ್ತದೆ. ಹೇಗಾದರೂ ತೆಗೆದುಕೊಳ್ಳಬೇಕೆಂದರೆ, ಹಾಗೆ ತೆಗೆದುಕೊಳ್ಳಲು ಬರುವುದಿಲ್ಲ ಕೆಲವು ಕಾನೂನಂಪ್ರಕಾರ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ಕಾರ್ಯಾಚರಣೆಗೆ ತರಲು ಕ್ಯಾಬಿನೇಟ್ ಸಬ್‌ಕಮಿಟಿಮುಂದೆ ಕಳುಹಿಸಿಕೊಟ್ಟಿದ್ದೇವೆ. ವರದಿ ತರಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೇ ಬೆಂಗಳೂರು ಅರಮನೆ ಕಾಂಪೌಂಡ್ ಒಳಗೆ ೨-೩ ಜನ ಖಾಸಗಿಯ ವ್ಯಕ್ತಿಗಳು ಕೆಲವು ಬಿಲ್ಡಿಂಗ್‌ಗಳನ್ನು ತೆಗೆದುಕೊಂಡು ವಾಸದಲ್ಲಿ ಇದ್ದಾರೆ. ಸರ್ಕಾರದವರು ಬೆಂಗಳೂರು ಪ್ಯಾಲೆಸ್‌ನ್ನು ತೆಗೆದುಕೊಳ್ಳಬೇಕೆಂದು ಪರಿಶೀಲನೆ ಮಾಡತಕ್ಕಂಥ ಕಾಲದಲ್ಲಿ ಖಾಸಗಿವ್ಯಕ್ತಿಗಳು ಯಾವ ಬಿಲ್ಡಿಂಗ್‌ಗಳನ್ನು ತೆಗೆದುಕೊಂಡಿರುತ್ತಾರೋ ಅವುಗಳನ್ನೂ ಸೇರಿಸಿ ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಖಾಸಗಿಯವರಿಗೆ ಅಲ್ಲಿ ಪ್ರವೇಶ ಇದೆಯೇ ಎನ್ನುವುದನ್ನು ನೋಡಬೇಕು, ಇದ್ದರೆ ಯಾವವಿದದಲ್ಲಿ ಸ್ವಾಧೀನವಿದೆ ನೋಡಬೇಕು. ಸ್ವಾಧೀನ ಇದ್ದರೆ ಅರಮನೆಯ ಆಸ್ತಿಯನ್ನು ತೆಗೆದುಕೊಳ್ಳುವಾಗ ಅದನ್ನು ಪ್ರತ್ಯೇಕಿಸಿ ತೆಗೆದುಕೊಳ್ಳುವುದಕ್ಕೆ ಬರುವುದೇ ಇಲ್ಲ. ಅದು ಯಾವರೀತಿ ತೆಗೆದುಕೊಳ್ಳಬೇಕು ಮತ್ತು ಎಷ್ಟರಮಟ್ಟಿಗೆ ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆ ಬರುತ್ತದೆ.

Acquisition of Land under Harangi Right Bank Canal

758 SRI K. S. KALAMARI GOWDA (Periyapatna).—Will the Minister of State for Major and Medium Irrigation be pleased to state:—

the extent of land in Periyapatna, K. R. Nagar and Hunsur taluks in which Harangi Right Bank Canal is passing through it, the extent of land that the Government has acquired, the number of persons to whom the compensation has been paid ? (Talukwise information may please be furnished) ?

SRI B. B. CHIMMNGAKATTI.—Minister of State for Major and Medium Irrigation

The work of Harangi Right Bank Canal has been taken up upto 85th K. M. and the work of K. R. Nagar sub-canal has been trken upto 40th K. M. Taluk wise details of land to be acquired in this regard are as follows :

Sl. No.	Taluk	Extent of land through which Right Bank Canal has been passed through up to 85th K. M.) Acres/Guntas	Land acquired so far Acres/Guntas	Land to be acquired Acres/Guntas	Amount of compensation paid in Rs.	Number of Khatedars to whom compensation has been paid
						persons
1.	K. R. Nagar	523-2½	3-27	519-15½	12,678-70	8
2.	Periyapatna	1045-09	191-18	653-31	9,27,525-33	539
3.	Hunsur	149-00	9-22	139-18	62,991-25	5
	Total ...	1717-11½	404-27	1312-24½	10,03,195-28	552 persons

ಡಾ॥ ಎಚ್. ಎಲ್. ತಿಮ್ಮೇಗೌಡ.—ಸ್ವಾಮಿ ಉತ್ತರವನ್ನು ಕೊಡುತ್ತಾ ಕೆ. ಆರ್. ನಗರದಲ್ಲಿ ೫೨೩ ಎಕರೆ ಹಾರಂಗಿ ಕಾಲುವೆ ತೆಗೆದಿದ್ದರೂ ಆಕ್ವಡೆಟ್ ಆಗಬೇಕಾಗಿದೆ. ಮೂರು ಎಕರೆ ಇಪ್ಪತ್ತೇಳು ಗುಂಟೆ ಮಾತ್ರ ಆಕ್ವಡೆಟ್ ಆಗಿದೆ. ಪೆರಿಯಾ ಪಟ್ಟಣ ತಾಲ್ಲೂಕಿನಲ್ಲಿ ೧೪೪೫ ಎಕರೆ ಆಕ್ವಡೆಟ್ ಆಗ ಬೇಕಾಗಿದ್ದಲ್ಲಿ ೧೯೧ ಎಕರೆ ಮಾತ್ರ ಆಕ್ವಡೆಟ್ ಆಗಿದೆ. ಹಾಸನದಲ್ಲಿ ೧೪೯ ಎಕರೆಗೆ ೯.೨ ಗಂಟೆ ಮಾತ್ರ ಆಕ್ವಡೆಟ್ ಆಗಿದೆ ಎಂದು ಹೇಳಿದಾರೆ. ಇದೇರೀತಿ ಮಂದಗತಿಯಲ್ಲಿ ಕೆಲಸ ಆದರೆ ಸರ್ಕಾರ ಏನು ಡಿವಿಜನ್‌ಗಳನ್ನು ಇಟ್ಟಿದ್ದಾರೆ ಆ ಎರಡು ಕಡೆಗಳಲ್ಲಿ ದುಡ್ಡನ್ನು ಕೊಟ್ಟಿದ್ದರೂ ಕಾಲುವೆ ತೆಗೆಯುವುದು ನಿಧಾನವಾಗಿದೆ. ದಯವಿಟ್ಟು ಈ ಆಕ್ವಡೆಟ್‌ಗಳನ್ನು ಆದಷ್ಟು ಜಾಗ್ರತೆ ಎಮರ್ಜನ್ಸಿ ಪ್ರಾವಿಶನ್‌ನಲ್ಲಿ ಮಾಡಿ ಮುಂದೆ ಕಾಲುವೆಗಳನ್ನು ತೆಗೆಯುವುದಕ್ಕೆ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಪೆರಿಯಾ ಪಟ್ಟಣ, ಕೆ. ಆರ್. ನಗರ ತಾಲ್ಲೂಕುಗಳಲ್ಲಿ ಲ್ಯಾಂಡ್ ಅಕ್ವಿಸಿಷನ್ ನಡೆದಾಗ್ಯೂ ಅದು ಯಶಸ್ವಿಯಾಗಿಲ್ಲ ಆದರೂ ಕೂಡ ಅದನ್ನು ಪೂರ್ತಿಯಾಗಿ ಕೊಡಿಸುವುದಕ್ಕೆ ಎಸ್.ಎಲ್.ಎ. ಆಫೀಸರ್‌ರವರು ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಇನ್‌ಶಿಯೇಟ್ ಮಾಡುವಂತೆ ಮಾಡುತ್ತೇವೆ. ಮತ್ತೆ ಎಸ್‌ಎಲ್‌ಎ ದವರು ಆದಷ್ಟು ಪೂರ್ತಿಯಾಗಿ ಅವರಿಗೆ ಪರಿಹಾರ ಕೊಡತಕ್ಕಂಥ ಕೆಲಸಕ್ಕೆ ಸರ್ವಪ್ರಯತ್ನ ಪಟ್ಟು ಆದಷ್ಟು ಜಾಗ್ರತೆ ಕೊಡುವಂತೆ ವ್ಯವಸ್ಥೆ ಮಾಡುತ್ತೇನೆ.

ಡಾ॥ ಎಚ್. ಎಲ್. ತಿಮ್ಮೇಗೌಡ.—ಅಕ್ವಿಸಿಷನ್ ಜಾಗ್ರತೆ ಮಾಡದೆ ಹೋದರೆ ಬಹಳ ತೊಂದರೆ ಯಾಗುತ್ತದೆ. ದುಡ್ಡನ್ನು ಕೂಡ ಬಹಳ ಕಡಿಮೆ ಕೊಡುತ್ತಿದ್ದೀರಿ. ಹಾರಂಗಿಗೆ ಎಷ್ಟು ದುಡ್ಡನ್ನು ಕೊಡಬೇಕೋ, ಎಷ್ಟು ದುಡ್ಡಿನ ಅವಶ್ಯಕತೆ ಇದೆಯೋ ಅದಕ್ಕಿಂತ ಕಡಿಮೆ ಕೊಡುತ್ತಿರುವುದರಿಂದ ಕಾಲುವೆ ಕೆಲಸಗಳು ಜಾಗ್ರತೆಯಾಗಿ ಆಗುತ್ತಿಲ್ಲ. ಆದ್ದರಿಂದ ಹಿಂದೆ ಯಾವರೀತಿ ಲ್ಯಾಂಡ್ ಅಕ್ವಿಸಿಷನ್ ಮಾಡುವುದಕ್ಕೆ ಪ್ರಾವಿಷನ್ ಇತ್ತೋ ಅದರಂತೆ ಸಾರ್ವಜನಿಕರ ಸೌಕರ್ಯಕ್ಕಾಗಿ ಮಾಡುವುದರಿಂದ ಲಕ್ಷಾಂತರ ಜನ ರೈತರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಜಾಗ್ರತೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈಗ ಪ್ರತಿಯೊಂದನ್ನೂ ನಾವೇ ಕನ್‌ಸಲ್ಟ್‌ಮಾಡಿ ಕೆಲಸವನ್ನು ತೆಗೆದುಕೊಂಡಿದ್ದೇವೆ. ಕೆಲಸಕ್ಕೆ ಏನು ತೊಂದರೆಯಾಗಿಲ್ಲ. ಆದಷ್ಟು ಜಾಗ್ರತೆಯಾಗಿಯೂ ಪೇಮೆಂಟ್ ಮಾಡುತ್ತೇವೆ.

ಅಧ್ಯಕ್ಷರು.—ಲ್ಯಾಂಡ್ ಅಕ್ವಿಸಿಷನ್ ಕೆಲಸ ಈಗ ಆಗಿರತಕ್ಕಂಥದ್ದು ೫೨೩ ಎಕರೆಗೆ ೩ ಎಕರೆ ೧೪೪೫ ಎಕರೆಗೆ ೧೯೧ ಎಕರೆ, ೧೪೯ ಎಕರೆಗೆ ೯ ಎಕರೆ ಈರೀತಿ ಆಕ್ವಯರ್ ಮಾಡಿಕೊಳ್ಳತಕ್ಕಂಥದ್ದು ಇಷ್ಟು ನಿಧಾನವಾದರೆ ಕೆಲಸ ತಡವಾಗುತ್ತದೆ. ಆದ್ದರಿಂದ ಜಾಗ್ರತೆ ಆಕ್ವಿಸಿಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತಾರೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆಕ್ವಿಸಿಷನ್ ಆದಷ್ಟು ಜಾಗ್ರತೆ ಮಾಡಿಕೊಂಡು ಪೇಮೆಂಟ್ ಕೂಡ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ ಹಾರಂಗಿ ಬಲದಂಡೆ ನಾಲೆ ಅರಕಲಗೂಡು ತಾಲ್ಲೂಕಿನಲ್ಲಿ ಹೋಗುತ್ತದೆ. ಅರಕಲಗೂಡು ತಾಲ್ಲೂಕು ಪೂರ್ತಿ ನಾಲೆ ತೆಗೆದು ಆಗಿದೆ. ಈ ನಾಲೆ ತೆಗೆಯಂತಕ್ಕಂಥ ಸಂದರ್ಭದಲ್ಲಿ ಏನೇನಾಗಿದೆ ಎಂದರೆ ಕೆರೆ, ಕಟ್ಟೆ, ಜಮೀನು, ಫಸಲು ಎಲ್ಲ ಹೋಗಿರುತ್ತದೆ. ಇದಕ್ಕೆ ಪರಿಹಾರ ೩-೪-೫-೬ ವರ್ಷಗಳಿಂದಲೂ ಕೊಟ್ಟಿಲ್ಲ. ಸುಮಾರು ಒಂದೊಂದು ಊರಿನಲ್ಲಿ ೧೦-೧೫ ಎಕರೆ ಜಮೀನನ್ನು ಕಳೆದುಕೊಂಡಿರತಕ್ಕಂಥ ರೈತರು ಇರುತ್ತಾರೆ, ಫಸಲನ್ನು ಕಳೆದುಕೊಂಡಂತ ರೈತರು ಇರುತ್ತಾರೆ. ಇವರಿಗೆ ಪರಿಹಾರ ಇದುವರೆಗೂ ಕೊಟ್ಟಿಲ್ಲ. ಈಗಲಾದರೂ ಪರಿಹಾರವನ್ನು ಕೊಡ ಬೇಕು. ಜೊತೆಗೆ ಉಳಿದಿರತಕ್ಕಂಥ ಆಕ್ವಿಸಿಷನ್ ಚಾರ್ಜಸ್ ಕೊಡುವುದಕ್ಕೆ ಮಾನ್ಯ ಸಚಿವರು ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ ನನಗೆ ಗೊತ್ತಿರುವ ಮಟ್ಟಿಗೆ ಹಲವಾರು ಸಂದರ್ಭದಲ್ಲಿ ಕ್ರಾಪ್ ಕಾಂಪನ್‌ಸೆಷನ್ ಅರಕಲಗೂಡು ತಾಲ್ಲೂಕಿಗೆ ಕೊಟ್ಟಿಲ್ಲ. ಖಚಿತವಾಗಿ ಕ್ರಾಪ್ ಕಾಂಪೆನ್‌ಸೆಷನ್ ಯಾವ ಯಾವ ಜಮೀನಿಗೆ ಕೊಟ್ಟಿಲ್ಲ ಅದನ್ನು ತಿಳಿಸಿದರೆ ಆದಷ್ಟು ಜಾಗ್ರತೆಯಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

SRI A. LAKSHMISAGAR.—Sir, the point here is, there has been inordinate delay in the acquisition of the lands. The total land to be acquired is 1717 acres. The land so far acquired is only 404 acres, i.e. One-fourth of the total extent of land to be acquired has not been acquired and it is pending for more than 5-6 years. Some 4-5 years back it was decided to acquire the land but the total land acquired is only 1/4th. What steps the Government are considering for the purpose of expediting the acquisition of these lands ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ ಭೂ ಸ್ವಾಧೀನ ಆಫೀಸರ್ ರೈಟ್ ಬ್ಯಾಂಕ್ ಕ್ಯಾನಲ್‌ಗೆ ಇರತಕ್ಕಂಥದ್ದು, ಮತ್ತು ಪ್ರಾಜೆಕ್ಟ್‌ಗೆ ಇರತಕ್ಕಂಥದ್ದು ಕುಶಾಲನಗರದಲ್ಲಿ ಒಂದು ಇವೆರಡಕ್ಕೂ ವರ್ಕ್ ಲೋಡ್ ಜಾಸ್ತಿಯಾಗಿದ್ದು ಮತ್ತೆ ಕುಶಾಲನಗರದಲ್ಲಿಯಾಗಲಿ, ಪೆರಿಯಾಪಟ್ಟಣ ದಲ್ಲಿಯಾಗಲಿ ಎಸ್.ಎಲ್.ಎ. ಆಫೀಸನ್ನು ಮಾಡಿ ಬ್ಯಾಲೆನ್ಸ್ ಇರತಕ್ಕಂಥ ಜಮೀನನ್ನೂ ಕೂಡ ಆದಷ್ಟು ಜಾಗ್ರತೆಯಾಗಿ ಅಕ್ವೈಯರ್ ಮಾಡಬೇಕೆಂದು ಇದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಆದಷ್ಟು ಜಾಗ್ರತೆ ಎಂದರೆ ಇನ್ನು ಎಷ್ಟು ಸಮಯದಲ್ಲಿ ಮಾಡಂತ್ತೀರಿ. ಸ್ವಲ್ಪ ದಿವಸವೆಂದರೆ ಇಷ್ಟು ದಿವಸಗಳಲ್ಲಿ ಎಂದು ಹೇಳುವುದಕ್ಕೆ ಆಗುತ್ತದೆಯೇ

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆದಷ್ಟು ಜಾಗ್ರತೆ ಮಾಡಿಸುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಯಾವ ಸ್ಟೇಜ್‌ನಲ್ಲಿ ಇದೆ ಎನ್ನುವುದನ್ನು ಹೇಳುವುದಕ್ಕೆ ಆಗುತ್ತದೆಯೇ ? ಪ್ರೊಸೀಜರ್ ಸ್ವಲ್ಪ ಸಿಂಪ್ಲಿಫೈ ಮಾಡುವುದಕ್ಕೆ ಆಗುತ್ತದೆಯೇ ಪಂತ್ತು ಪರಿಹಾರಧನ ಕೊಡುವುದಕ್ಕೆ ಬಜೆಟ್‌ನಲ್ಲಿ ಜಾಸ್ತಿ ಹಣವನ್ನು ಒದಗಿಸಬೇಕು. ಎರಡು ಸಾವಿರ ಪರಿಹಾರವನ್ನು ಕೊಡಲು ೧೦ ವರ್ಷ ಮಾಡಿಬಿಟ್ಟರೆ ನಾಲ್ಕು ಸಾವಿರ ಬಡ್ಡಿಯೇ ಆಗುತ್ತದೆ. ಇದು ನನ್ನ ಅನಂಭವ. ಆದ್ದರಿಂದ ತತ್‌ಕ್ಷಣ ತೀವ್ರವಾಗಿ ವಿಲೇವಾರಿ ಮಾಡುವುದಕ್ಕೆ ಪ್ರಯತ್ನ ಮಾಡಿ, ಯಾವ ಹಂತದಲ್ಲಿ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಇದೆ, ಯಾವ ಹಂತದಲ್ಲಿ ಇದೆ ಎನ್ನುವುದನ್ನು ಹೇಳಂತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅಕ್ವಿಸಿಷನ್ ಬೇರೆ ಬೇರೆ ಸ್ಟೇಜಸ್‌ನಲ್ಲಿ ಇರುತ್ತದೆ. ಅದನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

ಡಾ॥ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಸಚಿವರು ಕನ್‌ಸೆಂಟ್ ಕೊಟ್ಟಿದ್ದಾರೆಂದು ಹೇಳಿದ್ದಾರೆ. ೫-೬ ವರ್ಷಗಳ ಹಿಂದೆ ಯಾರು ಕನ್‌ಸೆಂಟ್ ಕೊಟ್ಟು ಜಮೀನನ್ನು ಬಿಟ್ಟುಕೊಟ್ಟಿದ್ದಾರೆ, ಅವರಂ ಬಿಟ್ಟುಕೊಟ್ಟ ಮೇಲೆ ಸರ್ಕಾರದವರು ಸುಲಭವಾಗಿ ೧೦-೧೫ ದಿವಸಗಳಲ್ಲಿಯೇ ಅಕ್ವಿಸಿಷನ್ ಮಾಡಿ ಅವರಿಗೆ ಪರಿಹಾರ ಕೊಡಬೇಕಾಗುತ್ತದೆ. ಈ ರೀತಿಯಾಗಿ ಎಷ್ಟು ಜನ ರೈತರು ಕನ್‌ಸೆಂಟ್ ಕೊಟ್ಟಿದ್ದಾರೆ, ಫೈನಲೈಸ್ ಆಗದೆ ಎಷ್ಟು ದಿವಸಗಳಿಂದ ಇರುತ್ತದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ಕನ್‌ಸೆಂಟ್ ಕೊಟ್ಟ ಕಡೆಯೆಲ್ಲ ಕೆಲಸ ಪ್ರಾರಂಭಮಾಡಿದ್ದೇವೆ. ನಾವು ಹಾರಂಗಿ ರೈಟ್ ಬ್ಯಾಂಕ್ ಕ್ಯಾನಲ್ ೧೬೦ ಕಿಲೋಮಿಟರ್ ಇದರಲ್ಲಿ ೮೭ ಕಿಲೋಮಿಟರ್ ಟ್ಯಾಕಲ್ ಮಾಡಿದ್ದೇವೆ. ಕೆ. ಆರ್. ನಗರ್ ಚಾನಲ್ ಕೂಡ ಟ್ಯಾಕಲ್ ಮಾಡಿದ್ದೇನೆ. ಎಷ್ಟು ಟ್ಯಾಕಲ್ ಮಾಡಿದ್ದೇವೆಯೋ ಅಷ್ಟು ಕನ್‌ಸೆಂಟ್ ಕೊಟ್ಟಿರತಕ್ಕಂಥದ್ದಾಗಿರುತ್ತದೆ.

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ದೊಡ್ಡ ಚಾನಲ್ಸ್ ವಿಚಾರವಾಯಿತು. ಈ ಚಿಕ್ಕ ಚಾನಲ್ಸ್ ಅಂದರೆ ಫೀಡ್ ಚಾನಲ್ಸ್ ಬಗ್ಗೆ ಕೆಲವು ಅಧಿಕಾರಿಗಳು ನಮಗೆ ಕಾಂಪೆನ್‌ಸೇಷನ್ ಕೊಡುವುದಿಲ್ಲ ವೆಂದು ಹೇಳುತ್ತಾರೆ. ಆದ್ದರಿಂದ ಫೀಡ್ ಚಾನಲ್ಸ್ ಬಗ್ಗೆ ಕಾಂಪೆನ್‌ಸೆಷನ್ ಕೊಡುವುದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡುತ್ತೀರಾ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಫೀಡ್ ಚಾನಲ್ಸ್ ಬಗ್ಗೆ ಅದನ್ನು ಕೊಡುವುದಕೆ ನನ್ನ ಇಲಾಖೆಗೆ ಬರುತ್ತದೆಯೇ ಇಲ್ಲವೇ ಎನ್ನುವುದನ್ನು ನೋಡಿಕೊಂಡು ಆನಂತರ ಹೇಳುತ್ತೇನೆ.